# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 361 |
| ಸದಸ್ಯರ ಹೆಸರು | ಶ್ರೀ ನಸೀರ್ ಅಹ್ಮದ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 23.09.2020 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಮೆಕ್ಕೆಜೋಳ ಬೆಳೆಯಲು ಕೃಷಿ ಇಲಾಖೆಯಿಂದ ಉತ್ತೇಜಿಸಲಾಗುತ್ತಿದೆಯೇ; ಹಾಗಿದ್ದಲ್ಲಿ, ಎಷ್ಟು ವಿಸ್ತೀರ್ಣದಲ್ಲಿ ಮೆಕ್ಕೆಜೋಳ ಬೆಳೆಯಲಾಗಿದೆ; (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದಲ್ಲಿ ಮೆಕ್ಕೆಜೋಳ ಬೆಳೆಯಲು ಕೃಷಿ ಇಲಾಖೆಯಿಂದ ಉತ್ತೇಜಿಸಲಾಗುತ್ತಿದೆ.<br>2020-21 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಒಟ್ಟು 13,91,136 ಹೆಕ್ಟೇರ್ ಪ್ರದೇಶದಲ್ಲಿ ಮುಸುಕಿನ ಜೋಳ ಬೆಳೆಯಲಾಗುತ್ತಿದೆ. ಜಿಲ್ಲಾವಾರು ಮಾಹಿತಿಯನ್ನು "ಅನುಬಂಧ" ದಲ್ಲಿ ನೀಡಲಾಗಿದೆ. |
| ಆ) | ಈ ಬೆಳೆ ಬೆಳೆಯಲು ಸರ್ಕಾರ ನೀಡುವ ಸೌಲಭ್ಯಗಳೇನು; | 2020-21ನೇ ಸಾಲಿನಲ್ಲಿ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನದಡಿ (ಎನ್.ಎಫ್.ಎಸ್.ಎಂ) ಒರಟುಧಾನ್ಯ (ಮುಸುಕಿನ ಜೋಳ) ಯೋಜನೆಯನ್ನು ರಾಜ್ಯದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಡುವೆ ಶೇ.60:40 ರ ಹಂಚಿಕೆ ಅನುಪಾತದಲ್ಲಿ ರಾಜ್ಯದ 09 ಜಿಲ್ಲೆಗಳಲ್ಲಿ(ಬಾಗಲಕೋಟೆ, ಬೆಳಗಾವಿ, ಬಳ್ಳಾರಿ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಹಾಸನ, ಹಾವೇರಿ ಮತ್ತು ವಿಜಯಪುರ) ಅನುಷ್ಠಾನಗೊಳಿಸಲಾಗುತ್ತಿದೆ.<br><br>ಒರಟುಧಾನ್ಯ (ಮುಸುಕಿನ ಜೋಳ) ಯೋಜನೆಯಡಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ-ಗುಚ್ಛ ಪ್ರಾತ್ಯಕ್ಷಿಕೆಗಳು, ಮೆಕ್ಕೆಜೋಳ ಬೆಳೆಯನ್ನು ಮುಖ್ಯ ಬೆಳೆಯಾಗಿ ಹಾಗೂ ಸೋಯಾಬೀನ್, ಹೆಸರು/ಅವರೆ/ಅಲಸಂದಿ/ಉದ್ದು ದ್ವಿದಳ ಧಾನ್ಯ ಬೆಳೆಗಳನ್ನು ಅಂತರ ಬೆಳೆಯಾಗಿ ಬೆಳೆಯುವ ಬಗ್ಗೆ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸಲಾಗುತ್ತಿದೆ. ಸಮಗ್ರ ಕೃಷಿ ಅಭಿವೃದ್ಧಿ ಚಟುವಟಿಕೆಗಳಾದ ಪ್ರಮಾಣೀಕೃತ ಮತ್ತು ಸಂಕರಣ ಬೀಜ ವಿತರಣೆ, ಸಮಗ್ರ ಪೋಷಕಾಂಶ ವಿತರಣೆ , ಸಮಗ್ರ ಪೀಡೆ ನಿರ್ವಹಣೆ, ಆಧುನಿಕ ಯಂತ್ರೋಪಕರಣಗಳ ವಿತರಣೆಗೆ ಸಹಾಯಧನವನ್ನು ಮುಸುಕಿನಜೋಳ ಬೆಳೆಯಲ್ಲಿ ಉತ್ಪಾದಕತೆ ಹೆಚ್ಚಿಸಲು ನೀಡಲಾಗುತ್ತಿದೆ. |

| | | |
|---|---|---|
| ಇ) | ಈ ಬೆಳೆಗೆ ಕೇಂದ್ರ ಸರ್ಕಾರ ಎಂ.ಎಸ್.ಪಿ. ದರ ನಿಗದಿಪಡಿಸಲಾಗಿದೆಯೇ; ಹಾಗಿದ್ದಲ್ಲಿ, ಎಷ್ಟು ದರ ನಿಗಧಿಪಡಿಸಲಾಗಿದೆ: | 2020-21ನೇ ಸಾಲಿನಲ್ಲಿ ಎಫ್.ಎ.ಕ್ಯೂ ಗುಣಮಟ್ಟದ ಮೆಕ್ಕೆಜೋಳ ಪ್ರತಿ ಕ್ವಿಂಟಾಲ್ ಗೆ ರೂ.1850/- ದರ ನಿಗಧಿಪಡಿಸಲಾಗಿದೆ. |
| ಈ) | ರಾಜ್ಯ ಸರ್ಕಾರದಿಂದ ಮೆಕ್ಕೆಜೋಳವನ್ನು ಖರೀದಿಸಲಾಗುತ್ತಿದೆಯೇ: | ರಾಜ್ಯ ಸರ್ಕಾರದಿಂದ ಮೆಕ್ಕೆಜೋಳ ಖರೀದಿ ಮಾಡಲಾಗುತ್ತಿಲ್ಲ. |
| ಉ) | ಇದುವರೆಗೆ ಎಷ್ಟು ಕ್ವಿಂಟಾಲ್ ಮೆಕ್ಕೆಜೋಳ ಖರೀದಿಸಲಾಗಿದೆ? (ವಿವರ ನೀಡುವುದು) | ಉದ್ಭವಿಸುವುದಿಲ್ಲ. |

**ಸಂಖ್ಯೆ: AGRI-ACT/164/ 2020**

**(ಬಿ.ಸಿ. ಪಾಟೀಲ್)**
**ಕೃಷಿ ಸಚಿವರು**

## ಅನುಬಂಧ-1

**2020-21 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಮುಸುಕಿನ ಜೋಳ ಬೆಳೆಯ ವಿಸ್ತೀರ್ಣ(ಹೆಕ್ಟೇರ್ ಗಳಲ್ಲಿ).**

| ಕ್ರಸಂ | ಜಿಲ್ಲೆಯ ಹೆಸರು | ವಿಸ್ತೀರ್ಣ |
|---|---|---|
| 1 | ಬೆಂಗಳೂರು ನಗರ | 1212 |
| 2 | ಬೆಂಗಳೂರು ಗ್ರಾಮಾಂತರ | 10622 |
| 3 | ರಾಮನಗರ | 1217 |
| 4 | ಕೋಲಾರ | 263 |
| 5 | ಚಿಕ್ಕಬಳ್ಳಾಪುರ | 44868 |
| 6 | ತುಮಕೂರು | 25420 |
| 7 | ಶಿವಮೊಗ್ಗ | 51466 |
| 8 | ಚಿತ್ರದುರ್ಗ | 106760 |
| 9 | ದಾವಣಗೆರೆ | 131829 |
| 10 | ಮೈಸೂರು | 42859 |
| 11 | ಚಾಮರಾಜನಗರ | 25673 |
| 12 | ಮಂಡ್ಯ | 5404 |
| 13 | ಕೊಡಗು | 3050 |
| 14 | ಹಾಸನ | 96046 |
| 15 | ಚಿಕ್ಕಮಗಳೂರು | 27903 |
| 16 | ದಕ್ಷಿಣ ಕನ್ನಡ | 0 |
| 17 | ಉಡುಪಿ | 0 |
| 18 | ಧಾರವಾಡ | 36933 |
| 19 | ಗದಗ | 92017 |
| 20 | ಹಾವೇರಿ | 184980 |
| 21 | ಉತ್ತರ ಕನ್ನಡ | 10589 |
| 22 | ಬೆಳಗಾವಿ | 131456 |
| 23 | ವಿಜಯಪುರ | 52397 |
| 24 | ಬಾಗಲಕೋಟೆ | 50097 |
| 25 | ರಾಯಚೂರು | 492 |
| 26 | ಕೊಪ್ಪಳ | 85530 |
| 27 | ಬಳ್ಳಾರಿ | 167778 |
| 28 | ಕಲಬುರಗಿ | 2965 |
| 29 | ಯಾದಗಿರಿ | 45 |
| 30 | ಬೀದರ್ | 1265 |
| | **ಒಟ್ಟು** | **1391136** |

ಕೃಷಿ ನಿರ್ದೇಶಕರು